SRI KAGODU THIMMAPPA (Minister for Public Works)—

(a) The work was taken up during June 1975 and completed. The causeway was opened for traffic during January 1978.

(b) 89 cents of private agricultural lands were acquired from 5 land owners and out of them, one person only belongs to S.C.

(c) The amount of compensation could not be paid for want of passing of the award.

(d) Yes.

(e) The damages have been repaired immediately and traffic was restored on 10-10-1981. Hence there is no delay in effecting the repairs.

ಹಾಸನದ ಶ್ರೀಮತಿ ಎಲ್. ವಿ ತಾಂತ್ರಿಕ ಶಾಲೆಯ ವಿದ್ಯಾರ್ಥಿಗಳು ಕಳೆದ ವರ್ಷ ನಡೆಸಿದ ಮುಷ್ಕರದ ಬಗ್ಗೆ

೧೫ (೫೦) ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ)—ವಿದ್ಯಾಮಂತ್ರಿಗಳು ಈ ವಿಷಯುಗಳನ್ನು ದಯೆಯಿಟ್ಟು ತಿಳಿಸುವರೆ ; —

(ಅ) ಹಾಸನ ಪಟ್ಟಣದ ಶ್ರೀಮತಿ ಎಲ್. ವಿ. ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಕಳೆದ ವರ್ಷ ತರಗತಿಗಳಿಗೆ ಹೋಗದೆ ಎಷ್ಟು ದಿನಗಳು ಮುಷ್ಕರ ನಡೆಸಿದರು ;

(ಆ) ಈ ರೀತಿ ಮುಷ್ಕರ ನಡೆಸಲು ಕಾರಣಗಳೇನು ?

ಶ್ರೀ ಜಿ. ಬಿ. ಶಂಕರರಾವ್ (ವಿದ್ಯಾ ಮಂತ್ರಿಗಳು)—

ಉತ್ತರ—(ಅ) ೧೬ ದಿನಗಳು.

(ಆ) ಶ್ರೀಮತಿ ಎಲ್. ವಿ. ತಾಂತ್ರಿಕ ಶಾಲೆಗೆ ಸೇರಿದ ಹಳೆಯ ಟೈಲರಿಂಗ್ ಶಾಲೆಯ ಕಟ್ಟಡಗಳನ್ನು, ಮಲೆನಾಡು ವಿದ್ಯಾಸಂಸ್ಥೆಗೆ ವರ್ಗಾಯಿಸದೆ, ಅದರಲ್ಲಿ ''ವಾಣಿಜ್ಯಶಾಸ್ತ್ರ'' ಮತ್ತು ''ವಸ್ತ್ರ ವಿನ್ಯಾಸ ಮತ್ತು ಉಡುಪು ತಯಾರಿಕೆ'' ವಿಷಯಗಳನ್ನು ಹೊಸದಾಗಿ ಪ್ರಾರಂಭಿಸಿ ನಡೆಸಬೇಕೆಂದು ಒತ್ತಾಯಿಸಿ ಮುಷ್ಕರ ನಡೆಸಲಾಯಿತು.

ಫಾರ್ಮಸಿ ಸೆಂಟರನ್ನು ಶಿವಮೊಗ್ಗದಲ್ಲಿ ಸ್ಥಾಪಿಸುವ ಬಗ್ಗೆ

೧೬ (೫೪) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ)—ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ ;—

(ಅ) ಶಿವಮೊಗ್ಗ ಜಿಲ್ಲೆಯು ಎಲ್ಲಾ ಆಸ್ಪತ್ರೆಗಳಲ್ಲಿ ಆಗಾಗ ಗ್ಲೂಕೋಸ್ ಬಾಟ್ಲಿಗಳ ಕೊರತೆ ಬಗ್ಗೆ ದೂರು ಇರುವುದು ಸರಕಾರ ಗಮನಿಸಿದೆಯೆ ;

(ಆ) ಎಲ್ಲಾ ಕೊರತೆಗಳನ್ನು ಗಮನಿಸಿ ಒಂದು ಫಾರ್ಮಸಿ ಸೆಂಟರನ್ನು ಶಿವಮೊಗ್ಗಕ್ಕೆ ಮಂಜೂರು ಮಾಡಿರುವುದು ನಿಜವೆ ;

(ಇ) ಹಾಗಿದ್ದರೆ ಏಕೆ ಕಾರ್ಯಗತಗೊಳಿಸಿಲ್ಲ, ಇನ್ನು ಎಷ್ಟು ದಿನಗಳಲ್ಲಿ ಕಾರ್ಯಗತಗೊಳಿಸ ಲಾಗುವುದು ;

(ಈ) ಸಧ್ಯಕ್ಕೆ ಕೊರತೆ ಸುಧಾರಣೆಗೆ ಸರಕಾರದ ಕ್ರಮಗಳೇನು ?